# ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ನ್ಯಾಯಾಲಯ, ಜಮಖಂಡಿ.

**ಸಿ.ಸಿ.ನಂ.954/2025**

1) ಜಮಖಂಡಿ ಕೋ-ಆಪರೇಟಿವ್ ಕ್ರೆಡಿಟ್ ಸೊಸೈಟಿ, ಜಮಖಂಡಿ
ಇದನ್ನು ಪ್ರತಿನಿಧಿಸುವವರು
ಶ್ರೀ.ಶಿವಾನಂದ ತಂದೆ ಅಯ್ಯಪ್ಪ ಮೈತ್ರಿ,
ವಯಸ್ಸುಃ 58 ವರ್ಷ, ಉದ್ಯೋಗಃ ವ್ಯವಸ್ಥಾಪಕರು,
ಸಾಃ ಜಮಖಂಡಿ.

....ಫಿರ್ಯಾದಿದಾರ

ವಿರುದ್ಧ

1) ಸ್ನೇಹಾ ತಂದೆ ವಿವೇಕಾನಂದ ಆಲಬಾಳ,
ವಯಸ್ಸುಃ 37 ವರ್ಷ, ಉದ್ಯೋಗಃ ಮನೆಗೆಲಸ,
ಸಾಃ ಹುಡ್ಕೋ ಕಾಲೋನಿ, ಕುಂಚನೂರ ರಸ್ತೆ,
ಜಮಖಂಡಿ.

....ಆರೋಪಿ

## ಃಃ ಆಪಾದನೆಯ ಸಾರಾಂಶ ಃಃ

ನಾನು ಶ್ರೀ.ರಾಜಶೇಖರ ಎಸ್.ಹರಸೂರ, ಬಿ.ಎ. ಎಲ್.ಎಲ್.ಬಿ. ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜಮಖಂಡಿ, ಈ ಮೇಲೆ ನಮೂದಿಸಿದ ಆರೋಪಿಯಾದ ನಿಮ್ಮ ವಿರುದ್ಧ ಈ ಕೆಳಗಿನಂತೆ ಆಪಾದನೆ ಇರುತ್ತದೆ ಎಂದು ತಿಳಿಸುತ್ತಿದ್ದೇನೆಃ

ಆರೋಪಿಯಾದ ನೀವು ಫಿರ್ಯಾದುದಾರ ಸೊಸೈಟಿಗೆ ಕಾನೂನುಬದ್ಧವಾಗಿ ಕೊಡಬೇಕಾಗಿದ್ದ ರೂ.6,54,299/- (ರೂಪಾಯಿ ಆರು ಲಕ್ಷ ಐವತ್ನಾಲ್ಕು ಸಾವಿರದ ಎರಡು ನೂರಾ ತೊಂಬತ್ತೊಂಬತ್ತು ಮಾತ್ರ) ಮೊತ್ತದ ಪಾವತಿಗಾಗಿ ನಿಮ್ಮ ಖಾತೆ ಇರುವ ಕರ್ನಾಟಕ ಬ್ಯಾಂಕ್ ಲಿ., ಶಾಖೆ ಜಮಖಂಡಿ ಬ್ಯಾಂಕಿನ ಚೆಕ್ ನಂ.178902, ದಿನಾಂಕ 31.12.2020, ರೂ.6,54,299/- ಮೊತ್ತಕ್ಕೆ ಫಿರ್ಯಾದಿದಾರರಿಗೆ ನೀಡಿದ್ದು, ಅವರು ಸದರಿ ಚೆಕ್ಕನ್ನು ತಮ್ಮ ಬ್ಯಾಂಕಿನ ಮೂಲಕ ನಗದೀಕರಿಸಲು ಹಾಜರುಪಡಿಸಿದಾಗ, ಮೊತ್ತ ಪಾವತಿಸಬೇಕಾದ ಬ್ಯಾಂಕಿನಿಂದ "FUNDS INSUFFICIENT" ಎನ್ನುವ ಹಿಂಬರಹದೊಂದಿಗೆ ದಿನಾಂಕ 02.01.2021 ರಂದು ಸದರಿ ಚೆಕ್ ನಗದೀಕರಣವಾಗದೇ ವಾಪಸ್ಸು ಬಂದಿದ್ದು, ಆ ಬಗ್ಗೆ ಫಿರ್ಯಾದಿದಾರರು ತಮ್ಮ ವಕೀಲರ ಮೂಲಕ ನಿಮಗೆ ದಿನಾಂಕ 27.01.2021 ರಂದು ತಿಳುವಳಿಕೆ ಪತ್ರವನ್ನು (ಲೀಗಲ್ ನೋಟೀಸ್) ನೀಡಿದ್ದು, ಸದರಿ ತಿಳುವಳಿಕೆ ಪತ್ರ (ಲೀಗಲ್ ನೋಟೀಸ್) ನಿಮಗೆ ದಿನಾಂಕ 03.02.2021 ರಂದು ಜಾರಿಯಾಗಿದ್ದು, ನಂತರ 15 ದಿನಗಳು ಕಳೆದರೂ ಸಹ ನೀವು

ಚೆಕ್ಕಿನಲ್ಲಿ ನಮೂದಿಸಿದ ಹಣ ಪಾವತಿಸಿರುವುದಿಲ್ಲ, ಆದ್ದರಿಂದ ಈ ಮೂಲಕ N.I. Act ಕಲಂ.138 ರ ಅಡಿಯಲ್ಲಿ ಅಪರಾಧ ಎಸಗಿರುತ್ತೀರಿ, ಎಂದು ನಿಮ್ಮ ಮೇಲೆ ಆಪಾದನೆ ಇರುತ್ತದೆ.

ಪ್ರಶ್ನೆ-1) ಈಗ ಓದಿ ಹೇಳಲಾದ ಆರೋಪದ ಸಾರಾಂಶ ತಿಳಿಯಿತೇ ?

ಉತ್ತರಃ ತಿಳಿಯಿತು.

ಪ್ರಶ್ನೆ-2) ಸದರಿ ಆರೋಪದ ಸಾರಾಂಶವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆಯಾಗ ಬಯಸುವಿರೊ ?

ಉತ್ತರಃ ತಪ್ಪು ಮಾಡಿಲ್ಲ, ವಿಚಾರಣೆಯಾಗಲಿ.

ಮೇಲೆ ಹೇಳಲಾದ ಆರೋಪದ ಸಾರಾಂಶವನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ, ತಿಳಿಸಿ ಹೇಳಿದ ನಂತರ ಅವರು ನೀಡಿದ ಉತ್ತರವನ್ನು ಅವರ ಭಾಷೆಯಲ್ಲಿ ಬರೆದುಕೊಳ್ಳಲಾಯಿತು ಎಂದು ಈ ಮೂಲಕ ದೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

RAJASHEKHAR

Digitally signed by RAJASHEKHAR
Date: 2025.12.11 16:40:55 +0530

ಸ್ಥಳಃ- ಜಮಖಂಡಿ.
ದಿನಾಂಕಃ 10.12.2025

ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.